ಎಂ ವಿ ಸಿ. ನಂ.276/2023 ಪಿಡಬ್ಲೂಃ 1

ದಿನಾಂಕಃ 05-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್ ಎಮ್ ಬಿ ವಕೀಲರಿಂದಃ ವಿ ಸಿ ಮೂಲಕಃ**

3. ಅರ್ಜಿದಾರರು ನಮ್ಮ ಆಸ್ಪತ್ರೆಯ ಎರಡು ವಿಭಾಗಳಲ್ಲಿ ಚಿಕಿತ್ಸೆಯನ್ನು ಪಡೆದಿದ್ದಾರೆ . ಅರ್ಜದಾರರು ಡಾಕ್ಟರ ಅಡವೈಜ್ ಪ್ರಕಾರ ಡಿಸ್ಚಾರ್ಜ ಹೊಂದಿರುತ್ತಾರೆ. ನಾನು ಅಂಗನ್ಯೂನ್ಯತೆಯನ್ನು ಪರ್ಟಿಕಲ್ ಲಿಂಬ್ ಗೆ ನೀಡಿರುತ್ತೇನೆ ಎಂದರೆ ಸಾಕ್ಷಿ ದೇಹದ ಭಾಗಕ್ಕೆ ಸಂಬಂಧಿಸಿದಂತೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ . ಡಿಸೆಬಿಲಿಟಿ ಸರ್ಟಿಫಿಕೇಟ್ ನ್ನು ಅರ್ಜಿದಾರರ ಸಂಪೂರ್ಣ ಚಿಕಿತ್ಸೆ ಮುಗಿದ ನಂತರ ನೀಡಿರುತ್ತೇನೆ. ಅರ್ಜಿದಾರರಿಗೆ ಪ್ಲಾಸ್ಟಿಕ್ ಸರ್ಜರಿ ಡಿಪಾರ್ಟಮೆಂಟ್ ನಲ್ಲಿ ಡಾಕ್ಟರಶ್ರೀಕುಮಾರ ರವರು ಚಿಕಿತ್ಸೆಯನ್ನು ನೀಡಿರುತ್ತಾರೆ. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ ಕೊನೆಯದಾಗಿ ದಿಃ 07-08-2024 ರಂದು ಚಿಕಿತ್ಸೆಯನ್ನು ಪಡೆದಿರುತ್ತಾರೆ . ಅರ್ಜಿದಾರರು ನಮ್ಮನ್ನು ಹೊರತು ಪಡಿಸಿ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ . ಅರ್ಜಿದಾರರು ನಮ್ಮಲ್ಲಿ ಚಿಕಿತ್ಸೆಗೆ ಬಂದಾಗ ಒಳ ಜೋಡಣೆಯಿಂದ ತೊಂದರೆ ಆಗುತ್ತಿದೆ ಎಂದು ಹೇಳಿಲ್ಲ . ಈಗ ಅರ್ಜಿದಾರರು ಏನು ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದಾರೆ ನನಗೆ ಮಾಹಿತಿ ಇಲ್ಲ . ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತದಲ್ಲಿ ಹೇಳಿದ ಗೈಡ್ ಲೈನ್ಸ ಪ್ರಕಾರ ಒಂದು ಪ್ರಪಾರ್ಮ ಹಾಗೂ ಫಾರ್ಮುಲಾ ಇರುತ್ತದೆ ಎಂದರೆ ಸರಿ . ಫಾರ್ಮುಲಾ ಪ್ರಕಾರ ಕೆಲ್ಕುಲೇಶನ್ ಮಾಡಿ ಪ್ರಫಾರ್ಮನಲ್ಲಿ ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಹಾಗೆ ಮಾಡುವ ಕ್ರಮ ಇರಲಿಲ್ಲ ಎಂದು ನುಡಿದಿರುತ್ತಾರೆ . ಡಿಸೆಬಿಲಿಟಿ ಸರ್ಟಿಫಿಕೇಟ್ ನಲ್ಲಿ ಪರ್ಸೆಂಟೇಜ್ ಮಾತ್ರ ಹಾಕಬೇಕು ಎಂದು ಸಾಕ್ಷಿ ನುಡಿದಿರುತ್ತಾರೆ . ಡಿಸೆಬಿಲಿಟಿ ಸರ್ಟಿಫಿಕೇಟ್ ನಲ್ಲಿ ಫಾರ್ಮುಲಾ ಮತ್ತು ಕೆಲ್ಕುಲೇಶನ್ ಬಗ್ಗೆ ನಮೂದು ಮಾಡುವ ಕ್ರಮ ಇಲ್ಲ ಎಂದು ನೋಟಿಫಿಕೇಶನ್ ಯಾವ ಪುಟದಲ್ಲಿ ಇದೆ ನಾನು ಹೇಳುವುದಿಲ್ಲ. ಎಲ್ಲಿ ಇದೆ ಎಂದು ಅದನ್ನು ನೋಡಿ ಹೇಳಲು ತೊಂದರೆ

ಇದೆಯಾ ಎಂದರೆ ಸಾಕ್ಷಿ ಈಗ ನೋಡಿ ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ . ಈಗ ನೋಡಿ ಹೇಳಲು ಏನು ತೊಂದರೆ ಇದೆ ಎಂದರೆ ಸಾಕ್ಷಿ ಈಗ ನೋಡಿ ಹೇಳಲು ಆಗುವುದಿಲ್ಲ ಕಾರಣ ಈಗ ಹೇಳುವುದಿಲ್ಲ ಎಂದು ನುಡಿದಿರುತ್ತಾರೆ . ಫಾರ್ಮುಲಾ ಹಾಗೂ ಪ್ರಫಾರ್ಮ ಬಗ್ಗೆ ಡಿಸೆಬಿಲಿಟಿ ಸರ್ಟಿಫಿಕೇಟ್ ಬಗ್ಗೆ ಬರೆಯುವ ಅಗತ್ಯ ಇಲ್ಲ ಎಂದು ಎಲ್ಲೂ ಇಲ್ಲ ಎಂದರೆ ಸರಿಯಲ್ಲ . ಆ ರೀತಿಯ ಫಾರ್ಮುಲಾ ಉಪಯೋಗಿಸಿ ಡಿಸೆಬಿಲಿಟಿ ಅಸೆಸ್ ಮಾಡಿ ಪ್ರಫಾರ್ಮಾನಲ್ಲಿ ನಮೂದಿಸಿದರೆ ನಿಜವಾದ ಅಂಗನ್ಯೂನ್ಯತೆ ಪ್ರಮಾಣ ಗೊತ್ತಾಗುತ್ತದೆ ಆ ಕಾರಣ ನಾನು ಡಿಸೆಬಿಲಿಟಿ ಸರ್ಟಿಫಿಕೇಟ್ ನಲ್ಲಿ ಫಾರ್ಮುಲಾ ಹಾಗೂ ಪ್ರಫಾರ್ಮ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಲೋನ್ ಇನ್ 42 ಪರ್ಸೆಂಟ್ ಅಪ್ಪರ ಲಿವ್ 7 ಪರ್ಸೆಂಟ್ ಯಾವ ಫಾರ್ಮುಲಾ ಪ್ರಕಾರ ಬಂದಿದೆ ಎಂದು ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ಬರೆದಿದ್ದೇನೆ ಎಂದು ನುಡಿದಿರುತ್ತಾರೆ . ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 4 ನೆ ಪ್ಯಾರಾದಲ್ಲಿ ಫಾರ್ಮುಲಾ ಹಾಗೂ ಕೆಲ್ಕುಲೇಶನ್ ಇಲ್ಲ ಎಂದರೆ ಸರಿಯಲ್ಲ . ನಾನು ಡಿಸೆಬಿಲಿಟಿ ಸರ್ಟಿಫಿಕೇಟ್ ನ್ನು ಗೆಜೆಟ್ ನೋಟಿಫಿಕೇಶನ್ ಪ್ರಕಾರ ಕೊಟ್ಟಿಲ್ಲ ಎಂದರೆ ಸಾಕ್ಷಿ ಗೆಜೆಟ್ ನೋಟಿಫಿಕೇಶನ್ ಪ್ರಕಾರ ಕೊಟ್ಟಿದ್ದೇನೆ ಆದರೆ ಆಸ್ಪತ್ರೆಯ ಅನುಸೂಚಿ ಪ್ರಫಾರ್ಮ ಪ್ರಕಾರ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ . ಇಂಪ್ಲೆಂಟ್ ನಿಂದ ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲದೇ ಇರುವುದರಿಂದ ಅದನ್ನು ತೆಗೆಯುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿ ಹಾಗೆ ಸೂಚಿಸುವುದು ಸರಿಯಲ್ಲ ಎಂದು ನುಡಿದಿರುತ್ತಾರೆ . ಅರ್ಜಿದಾರರಿಗೆ ಕೃತಕ ಕಾಲನ್ನು ಹಾಕಿಕೊಳ್ಳಲು ಸಲಹೆ ನೀಡಿದ್ದೇನೆ . ರಿವಿಜನ್ ಎಂಬಿಟೇಶನ್ ಮಾಡಿದರೆ ಕೃತಕ ಕಾಲನ್ನು ಜೋಡಿಸಲು ಸುಲಭವಾಗುತ್ತದೆ ಎಂದು ಸಲಹೆ ನೀಡಿದ್ದೇವೆ ಎಂದು ನುಡಿದಿರುತ್ತಾರೆ . ಕೃತಕ ಕಾಲನ್ನು ಜೋಡಿಸಿದ ನಂತರ ಅಂಗನ್ಯೂನ್ಯತೆ ಪ್ರಮಾಣ ಕಡಿಮೆ ಆಗಬಹುದು ಎಂದರೆ ಹಾಗೆ ಸೂಚಿಸುವುದು ಸರಿಯಲ್ಲ. ಒಳ ಜೋಡಣೆ ತೆಗೆದ ನಂತರ ಕೃತಕ ಕಾಲನ್ನು ಅಳವಡಿಸಿದ ನಂತರ ಅಂಗನ್ಯೂನ್ಯತೆ ಪ್ರಮಾಣ ಮತ್ತೇ ಅಳತೆ ನೋಡಬೇಕಾಗುತ್ತದೆ ಎಂದರೆ ಸಾಕ್ಷಿ ಅಂಗನ್ಯೂನ್ಯತೆ ಪ್ರಮಾಣ ಬದಲಾಗುವುದಿಲ್ಲ ಎಂದು ನುಡಿದಿರುತ್ತಾರೆ . ಪ್ಯಾರಾ 5(ಎ)ದಲ್ಲಿ ಹೇಳಿರುವ infection remove ಆಗಿಲ್ಲ . ಪ್ಯಾರಾ ನಂ.5 ಎ,ಬಿ, ಸಿ ನಮೂದು ಮಾಡಿರುವುದನ್ನು

ಅವರ ಪಾಲೋ ಆಪ್ ಟ್ರಿಟಮೆಂಟ್ ರೆಕಾರ್ಡನಲ್ಲಿ ನಮೂದು ಮಾಡಲಾಗಿದೆ . ಸಾಕ್ಷಿ ಅದು ಆಸ್ಪತ್ರೆಯ ಒಪಿಡಿ ಕಡತದಲ್ಲಿದೆ ಎಂದು ಹೇಳಿದ್ದು ಅದನ್ನು ದಿಃ 07-8-2024 ರಂದು ನಮೂದು ಮಾಡಲಾಗಿದೆ. ಅರ್ಜಿದಾರರ ಅಂಗನ್ಯೂನ್ಯತೆ ಪ್ರಮಾಣ ಪತ್ರ ಅಳತೆ ಮಾಡಲು ಪರೀಕ್ಷೆ ಮಾಡಿದ್ದು ದಿಃ 07-08-2024 ಎಂದರೆ ಸರಿ . ಅದಕ್ಕೂ ಮೊದಲಿನ ಟ್ರಿಟಮೆಂಟ್ ಕಡತದಲ್ಲಿ ಅದನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಪಾಯಿಂಟ್ ನಂ. ಎ ನಮೂದು ಇದೆ , ಬಿ ಮತ್ತು ಸಿ ಬಗ್ಗೆ ನಮೂದಾಗಿಲ್ಲ ಎಂದು ನುಡಿದಿರುತ್ತಾರೆ . Infection ಬಗ್ಗೆ ಇಷ್ಟು cost ಆಗುತ್ತದೆ ಎಂದು ನಮೂದು ಮಾಡಿಲ್ಲ . ಆಸ್ಪತ್ರೆಯ ಯಾವುದೇ ಕಡತದಲ್ಲಿ ನಮೂದಿಲ್ಲ. ಅರ್ಜಿದಾರರು ಈಗಲೂ ಏನು ತೊಂದರೆ ಇದ್ದರೆ ಈಗಲೂ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಎಂದರೆ ಸಾಕ್ಷಿ ಈಗ ಅದನ್ನು ಉತ್ತರಿಸಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ .

ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಕ್ತಾಯವಾದ ಕಾರಣ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.